ದಿ: 22-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು: 3ನೇ ಪ್ರತಿವಾದಿ ಪರ ಶ್ರೀ ಬಿ ಎಸ್ ಡಿ ವಕೀಲರಿಂದ:**

1. ಈ ದಾವೆಯನ್ನು ನಾನು ತಿಮ್ಮಪ್ಪಯ್ಯ, ಶ್ರೀಹರಿ, ಮಲ್ಲಿಕಾರ್ಜುನ ಇವರ ಮೇಲೆ ನಮ್ಮ ಪಿತ್ರಾರ್ಜಿತ ಆಸ್ತಿ ನಮಗೆ ಬರಬೇಕೆಂದು ಸಲ್ಲಿಸಿದ್ದೇನೆ. 1ನೇ ಪ್ರತಿವಾದಿ ನನ್ನ ತಂದೆಯಾಗಬೇಕು, 2ನೇ ಪ್ರತಿವಾದಿ ನನ್ನ ತಮ್ಮನಾಗಬೇಕು. 2ನೇ ಪ್ರತಿವಾದಿ ಬೆಂಗಳೂರಿಒನಲ್ಲಿ ವಾಸ ಮಾಡುತ್ತಾರೆ. ವಾದ ಪತ್ರದಲ್ಲಿ 2ನೇ ಪ್ರತಿವಾದಿಯ ವಿಳಾಸ ದೇವದುರ್ಗ ಎಂದು ತೋರಿಸಿದ್ದೇನೆ. 3ನೇ ಪ್ರತಿವಾದಿಯ ಮೇಲೆ ದಾವೆಯನ್ನು ಯಾಕೆ ಹಾಕಿದ್ದೀರಾ ಎಂದರೆ ಸಾಕ್ಷಿಯು ನಮ್ಮ ತಂದೆ ಅವರಿಗೆ ಮಾರಾಟ ಮಾಡಿದ ವಿಷಯ ಗೊತ್ತಾಯಿತು ಆ ಕಾರಣಕ್ಕೆ ಹಾಕಿದ್ದೇನೆ ಎನ್ನುತ್ತಾರೆ. ನಾನು ಮತ್ತು ನನ್ನ ತಂದೆ ಹಾಗೂ ನಮ್ಮ ಕುಟುಂಬದ ಸದಸ್ಯರು ಒಟ್ಟು ಕೂಡಿಯೇ ವಾಸ ಮಾಡುತ್ತೇವೆ. ನಮ್ಮ ಕುಟುಂಬದ ಕೃರ್ತ ಮತ್ತು ಯಜಮಾನರಾಗಿ ನನ್ನ ತಂದೆಯವರು ನಿರ್ವಹಿಸುತ್ತಾರೆ. ನನ್ನ ಹಾಗೂ ವಾದಿ ನಂ. 2 ಮತ್ತು 3 ಹಾಗೂ 2ನೇ ಪ್ರತಿವಾದಿ ಇವರ ಮದುವೆಯಾಗಿರುತ್ತದೆ. 2ನೇ ವಾದಿಯ ಮದುವೆ 2014 ನೇ ಸಾಲಿನಲ್ಲಿ ಆಗಿರುತ್ತದೆ. ನನ್ನ ಮದುವೆ 2012 ನೇ ಸಾಲಿನಲ್ಲಿ ಆಗಿದೆ. 2ನೇ ಪ್ರತಿವಾದಿಯ ಮದುವೆ 2015 ನೇ ಸಾಲಿನಲ್ಲಿ ಆಗಿದೆ. ನಮ್ಮ ಎಲ್ಲರ ಮದುವೆಯನ್ನು ನನ್ನ ತಂದೆಯವರೆ ಮಾಡಿದ್ದಾರೆ.

2. ನಮ್ಮ ಪಿತ್ರಾರ್ಜಿತ ಆಸ್ತಿಗಳು ಮೊದಲು ನಮ್ಮ ತಾತಾ ವೆಂಕಟಪ್ಪಯ್ಯ ತಂದೆ ತಿಮ್ಮಪ್ಪಯ್ಯ ಇವರ ಹೆಸರಿನಲ್ಲಿತ್ತು. ಅವರಿಗೆ ನನ್ನ ತಂದೆ ಒಬ್ಬರೆ ಮಗನಿದ್ದರು. ನನ್ನ ತಾತಾ ವೆಂಕಟಪ್ಪಯ್ಯನವರು 4 ಜನ ಅಣ್ಣ ತಮ್ಮಂದಿರು ಇದ್ದರು. ಅವರೆಂದರೆ, ಗಿರೆಪ್ಪಯ್ಯ, ವೆಂಕಟಪ್ಪಯ್ಯ, ಚಿನ್ನಪ್ಪಯ್ಯ ಮತ್ತು ಅಚ್ಚಪ್ಪಯ್ಯ ಅಂತಾ ಇದ್ದರು. ಇವರೆಲ್ಲರೂ ಬೇರೆ ಬೇರೆಯಾಗಿದ್ದರು. ವೆಂಕಟಪ್ಪಯ್ಯನವರಿಗೆ ಸ ನಂ 494 ಮತ್ತು

ಸ ನಂ 435/3/1 ಆಸ್ತಿಗಳು ಇದ್ದವು. ನನ್ನ ತಾತನಿಂದ ನನ್ನ ತಂದೆಯ ಹೆಸರಿಗೆ ಮೇಲೆ ಹೇಳಿದ ಎರಡು ಆಸ್ತಿಗಳು ಮುಟೇಶನ್ ಆಗಿರುತ್ತವೆ. ನನ್ನ ತಂದೆ ಹೆಸರಿಗೆ ದಾವಾ ಜಮೀನು ಬಿಟ್ಟು ಬೇರೆ ಆಸ್ತಿಗಳು ಇರುವುದಿಲ್ಲ. ಸ ನಂ 494 , ವಿಸ್ತೀರ್ಣ 10-00 ಎಕರೆ ಜಮೀನು ಇತ್ತು. ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ದೇವದುರ್ಗ ಸೀಮಾಂತರದಲ್ಲಿದೆ. ಸ ನಂ 494 ವಿಸ್ತೀರ್ಣ 10-00 ಎಕರೆ ಜಮೀನನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಸದರಿ ಜಮೀನಿನಲ್ಲಿ ಭಾಗ ಆಗಿ ನಮಗೆ ಭಾಗ ಬಂದಿರುತ್ತದೆ. ಸುಮಾರು 6 ತಿಂಗಳ ಹಿಂದೆ ಭಾಗ ಮಾಡಿಕೊಂಡಿದ್ದೇವೆ. ನನ್ನ ಮತ್ತು ನನ್ನ ತಮ್ಮನ ಹೆಸರಿಗೆ ತಲಾ 5-00 ಎಕರೆ ಭಾಗ ಆಗಿದೆ. ಈ ದಾವೆಯಲ್ಲಿ ಸ ನಂ 494, ವಿಸ್ತೀರ್ಣ 10-00 ಎಕರೆ ಜಮೀನನನ್ನು ಯಾಕೆ ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಅರೆ.

3. 3ನೇ ಪ್ರತಿವಾದಿ ನನಗೆ ಪರಿಚಯ ಇಲ್ಲ, ನನ್ನ ತಂದೆಗೆ ಪರಿಚಯ ಇದ್ದಾನೆ. 3ನೇ ಪ್ರತಿವಾದಿ ನನ್ನ ತಂದೆಗೆ ಎಷ್ಟು ವರ್ಷದಿಂದ ಪರಿಚಯ ಇದ್ದಾನೆ ಗೊತ್ತಿಲ್ಲ. ನನ್ನ ತಂದೆ ದಾವಾ ಜಮೀನು 3ನೇ ಪ್ರತಿವಾದಿಗೆ 2021-22 ರಲ್ಲಿ ಮಾರಾಟ ಮಾಡಿದ್ದಾರೆ ನಿಖರವಾಗಿ ದಿನಾಂಕ ಹೇಳಲು ಬರುವುದಿಲ್ಲ. ನಾನು ಬಿಕಾಂ ಪದವೀಧರನಾಗಿದ್ದೇನೆ. ದೇವದುರ್ಗ ಸೀಮಾದ ಸ ನಂ 475/*/1, ಯಾರ ಹೆಸರಿನಲ್ಲಿದೆ ನನಗೆ ಗೊತ್ತಿಲ್ಲ. ಸಾಕ್ಷಿದಗೆ ದೇವದುರ್ಗ ಸೀಮಾದ ಸ ನಂ 475/*/1, ವಿಸ್ತೀರ್ಣ 1 ಎಕರೆ 35 ಗುಂಟೆ ಪಹಣಿಯನ್ನು ತೋರಿಸಿ ಯಾರ ಹೆಸರಿಗೆ ಎಂದು ಸೂಚಿಸಿದ್ದು, ಸಾಕ್ಷಿಯು ನನ್ನ ತಂದೆ ಹೆಸರಿಗೆ ಇದೆ ಎಂದು ಗುರುತಿಸಿದ್ದರಿಂದ ಅದನ್ನು ನಿ ಡಿ 1 ಎಂದು ಗುರುತಿಸಲಾಯಿತು. ಸಾಕ್ಷಿಗೆ ದೇವದುರ್ಗ ಸೀಮಾದ ಸ ನಂ 475/*/2, ವಿಸ್ತೀರ್ಣ 1 ಎಕರೆ 26 ಗುಂಟೆ ಪಹಣಿಯನ್ನು ತೋರಿಸಿ ಯಾರ ಹೆಸರಿಗೆ ಎಂದು ಸೂಚಿಸಿದ್ದು, ಸಾಕ್ಷಿಯು ನನ್ನ ತಂದೆ ಹೆಸರಿಗೆ ಇದೆ ಎಂದು ಗುರುತಿಸಿದ್ದರಿಂದ

ಅದನ್ನು ನಿ ಡಿ 2 ಎಂದು ಗುರುತಿಸಲಾಯಿತು. ಸಾಕ್ಷಿಗೆ ದೇವದುರ್ಗ ಸೀಮಾದ ಸ ನಂ 475/*/3, ವಿಸ್ತೀರ್ಣ 1 ಎಕರೆ 27 ಗುಂಟೆ ಪಹಣಿಯನ್ನು ತೋರಿಸಿ ಯಾರ ಹೆಸರಿಗೆ ಎಂದು ಸೂಚಿಸಿದ್ದು, ಸಾಕ್ಷಿಯು ನನ್ನ ತಂದೆ ಹೆಸರಿಗೆ ಇದೆ ಎಂದು ಗುರುತಿಸಿದ್ದರಿಂದ ಅದನ್ನು ನಿ ಡಿ 3 ಎಂದು ಗುರುತಿಸಲಾಯಿತು. ನಿ ಡಿ 1 ರಿಂದ 3 ರ ಜಮೀನುಗಳು ನನ್ನ ತಂದೆಗೆ ನನ್ನ ತಾತನವರಿಂದ ಬಂದಿರುತ್ತವೆ. ಈಗಲೂ ನಿ ಡಿ 1 ರಿಂದ 3 ಜಮೀನುಗಳು ನನ್ನ ತಂದೆಯ ಹೆಸರಿನಲ್ಲಿವೆ. ನಿ ಡಿ 1 ರಿಂದ 3 ಜಮೀನುಗಳು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ನಿ ಡಿ 1 ರಿಂದ 3 ರಂತಿರುವ ಜಮೀನು ನಿಮ್ಮ ತಂದೆಯಿಂದ ರೀಟಾ ಪ್ರಾನ್ಸಿಸ್ ಇವರಿಗೆ 2006 ರಲ್ಲಿ ಮಾರಾಟ ಆಗಿದೆ ಎಂದರೆ ಸಾಕ್ಷಿಯು ಹೌದು ಡಾನ್ ಬಾಸ್ಕೋ ಶಾಲೆಗೆ ಮಾರಾಟ ವಾಗಿದೆ ಎನ್ನುತ್ತಾರೆ. ಸಾಕ್ಷಿ 02 ಮುಟೇಶನ್ ನ್ನು ನೋಡಿ ಗುರುತಿಸಿದ್ದರಿಂದ ನಿ ಡಿ 4 ಮತ್ತು 5 ಎಂದು ಗುರುತಿಸಲಾಯಿತು. ಸದರಿ ಖರೀದಿದಾರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿಲ್ಲ ಎಂದರೆ ಸರಿ. ಅದೇ ರೀತಿ ಸ ನಂ 475/*/1 ವಿಸ್ತೀರ್ಣ 1 ಎಕರೆ 21 ಗುಂಟೆ, ಸ ನಂ 475/*/2 ವಿಸ್ತೀರ್ಣ 33 ಗುಂಟೆ, ಸ ನಂ 475/*/3 ವಿಸ್ತೀರ್ಣ 34 ಗುಂಟೆ, ದಿ ಬೆಂಗಳೂರು ಸೆಲಿಸಿಯಸ್ ಸೂಸೈಟಿ ಡಾನ್ ಬಾಸ್ಕೋ ಇವರಿಗೆ ನಿಮ್ಮ ತಂದೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಟೇಶನ್ ನೋಡಿ ಗುರುತಿಸಿದ್ದರಿಂದ ನಿ ಡಿ 6 ಎಂದು ಗುರುತಿಸಲಾಯಿತು. ಸಾಕ್ಷಿಗೆ ದೇವದುರ್ಗ ಸೀಮಾದ ಸ ನಂ 494/*, ವಿಸ್ತೀರ್ಣ 02 ಎಕರೆ 04 ಗುಂಟೆ ಪಹಣಿಯನ್ನು ತೋರಿಸಿ ಯಾರ ಹೆಸರಿಗೆ ಎಂದು ಸೂಚಿಸಿದ್ದು, ಸಾಕ್ಷಿಯು ನನ್ನ ತಂದೆ ಹೆಸರಿಗೆ ಇದೆ ಎಂದು ಗುರುತಿಸಿದ್ದರಿಂದ ಅದನ್ನು ನಿ ಡಿ 7 ಎಂದು ಗುರುತಿಸಲಾಯಿತು. ಸಾಕ್ಷಿಗೆ ದೇವದುರ್ಗ ಸೀಮಾದ ಸ ನಂ 475/*/*, ವಿಸ್ತೀರ್ಣ 03 ಎಕರೆ 08 ಗುಂಟೆ ದಿ ಬೆಂಗಳೂರು

ಸೆಲಿಸಿಯಸ್ ಸೂಸೈಟಿ ಡಾನ್ ಬಾಸ್ಕೋ ಇವರಿಗೆ ನಿಮ್ಮ ತಂದೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಪಹಣಿಯನ್ನು ನೋಡಿ ಗುರುತಿಸಿದ್ದರಿಂದ ನಿ ಡಿ 8 ಎಂದು ಗುರುತಿಸಲಾಯಿತು.

4. ಈ ಮೇಲೆ ಹೇಳಿದ ಆಸ್ತಿಗಳನ್ನು ಹೊರತುಪಡಿಸಿ ನಿಮ್ಮ ತಂದೆಗೆ ಬೇರೆ ಸೀಮಾಂತರದ ಆಸ್ತಿಗಳು ಸೇರಿವೆಯಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಗಣದಿನ್ನಿ ಸೀಮಾದ ಸ ನಂ 138/*/*, ವಿಸ್ತೀರ್ಣ 04 ಎಕರೆ 10 ಗುಂಟೆ ಜಮೀನನ್ನು ಮಾರೆಪ್ಪ ಬಿನ್ ಸಾಯಿಬಾಬು ಇವರಿಗೆ ನಿಮ್ಮ ತಂದೆ ಮಾರಾಟ ಮಾಡಿದ್ದಾರೆ ಸಾಕ್ಷಿಗೆ ಸದರಿ ಮುಟೇಶನ್ ಪ್ರತಿಯನ್ನು ತೋರಿಸಿದ್ದು ನೋಡಿ ಗುರುತಿಸಿದ್ದರಿಂದ ಅದನ್ನು ನಿ ಡಿ 9 ಎಂದು ಗುರುತಿಸಲಾಯಿತು. ಗಣದಿನ್ನಿ ಸೀಮಾದ ಸ ನಂ 138 ಒಟ್ಟು ಎಷ್ಟು ವಿಸ್ತೀರ್ಣ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ಒಟ್ಟು 19-00 ಎಕರೆ ವಿಸ್ತೀರ್ಣದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ. ದಿನಾಂಕ: 19-01-2021 ರಂದು ಶಿರವಾರ ತಾಲೂಖಿನ ಗಣದಿನ್ನಿ ಸೀಮಾದ ಸ ನಂ 138/*/*, ಒಟ್ಟು ವಿಸ್ತೀರ್ಣ 19 ಎಕರೆ 00 ಗುಂಟೆ ಜಮೀನನ್ನು ನಿಮ್ಮ ತಂದೆ 3ನೇ ಪ್ರತಿವಾದಿಗೆ ನೋಂದಣಿ ಖರೀದಿಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಖರೀದಿ ಕರಾರು ಪತ್ರವು ನೋಂದಣಿ ಸಂಖ್ಯೆ 9763/2020-2021 ರಂತೆ ನೋಂದಣಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಖರೀದಿಕರಾರು ಪತ್ರವು ಒಟ್ಟು ರೂ 45 ಲಕ್ಷ ಗಳಿಗೆ ಆಗಿದ್ದು, ಮುಂಗಡವಾಗಿ ಖರೀದಿಕರಾರು ಪತ್ರ ನೋಂದಣಿಯಾಗುವ ಕಾಲಕ್ಕೆ ರೂ 25 ಲಕ್ಷ ಗಳನ್ನು ನಿಮ್ಮ ತಂದೆ 3ನೇ ಪ್ರತಿವಾದಿಯಿಂದ ಪಡೆದುಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನಿಮ್ಮ ತಂದೆ ಖರೀದಿ ಕರಾರು ನೋಂದಣಿಯಾದ ನಂತರ ಬೇರೆಯವರು ಹೆಚ್ಚಿನ ಬೆಲೆಗೆ ಜಮೀನು ಖರೀದಿ ಮಾಡುತ್ತಾರೆ ನೀವು ಇನ್ನೂ ಹೆಚ್ಚು ಹಣ ಕೊಡಬೇಕೆಂದು ಹೇಳಿ ನೊಂದಣಿಯನ್ನು ರದ್ದುಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೋಂದಣಿ ರದ್ದು ಮಾಡುವ ಕಾಲಕ್ಕೆ ಮುಂಗಡವಾಗಿ

ಪಡೆದುಕೊಂಡಿದ್ದ ರೂ 25 ಲಕ್ಷ ಹಣವನ್ನು ನಿಮ್ಮ ತಂದೆ 3ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡಿದ ಮೇಲೆ ಕೊಡುತ್ತೇನೆಂಬ ವಿಶ್ವಾಸದ ಮೇಲೆ ರದ್ದುಮಾಡಿದರು ಎಂದರೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿಯ ಹೆಸರಿಗೆ ಖರೀದಿಕರಾರು ನೋಂದಣಿಯಾದ ಜಮೀನನ್ನು ನಿಮ್ಮ ತಂದೆ ಮಾರೆಪ್ಪ ಮತ್ತು ಇನ್ನಿತರರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ನಿಮ್ಮ ತಂದೆ ರೂ 3 ಲಕ್ಷದ 45 ಸಾವಿರಗಳಿಗೆ ದಾವಾ ಆಸ್ತಿಯನ್ನು 3ನೇ ಪ್ರತಿವಾದಿಗೆ ಮಾರಾಟ ಮಾಡಲು ಒಪ್ಪಿ ಉಳಿದ ಹಣವನ್ನು ನಂತರ ಕೊಡುತ್ತೇನೆಂದು ಹೇಳಿದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನೋಂದಣಿಯಾದನಂತರ 3ನೇ ಪ್ರತಿವಾದಿ ನಿಮಗೆ ಮತ್ತು ನಿಮ್ಮ ತಂದೆ ತಾಯಿಯವರಿಗೆ ಉಳಿದ ರೂ 21 ಲಕ್ಷದ 55 ಸಾವಿರಗಳು ಕೇಳಿದರು ಎಂದರೆ ನನಗೆ ಗೊತ್ತಿಲ್ಲ. ನಿಮಗೆ ಮೇಲೆ ಹೇಳಿದ ಎಲ್ಲಾ ವಿಷಯಗಳು ಗೊತ್ತಿದ್ದರೂ ಉದ್ದೇಶ ಪೂರ್ವಕವಾಗಿ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಯ ಉಳಿದ ಹಣವನ್ನು ಮುಳಗಿಸಬೇಕೆಂಬ ಉದ್ದೇಶದಿಂದ ದಾವಾ ಆಸ್ತಿ ಮಾರಾಟ ಆಗಿರುವುದು ಗೊತ್ತಿದ್ದರೂ ನಮಗೆ ಭಾಗ ಬರಬೇಕೆಂದು ಸುಳ್ಳು ದಾವೆಯನ್ನು 3ನೇ ಪ್ರತಿವಾದಿಯ ವಿರುದ್ದ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

5. ಸಾಕ್ಷಿಗೆ ಕಾಟಮಳ್ಳಿ ಸೀಮಾದ ಸ ನಂ 3/ಪಿ2/*, ವಿಸ್ತೀರ್ಣ 02 ಎಕರೆ 28 ಗುಂಟೆ ಜಮೀನನ್ನು ನಿಮ್ಮ ತಂದೆಯ ಹೆಸರಿಗೆ ಮುಟೇಶನ್ ಆಗಿದೆ ಸಾಕ್ಷಿಗೆ ಸದರಿ ಮುಟೇಶನ್ ಪ್ರತಿಯನ್ನು ತೋರಿಸಿದ್ದು ನೋಡಿ ಗುರುತಿಸಿದ್ದರಿಂದ ಅದನ್ನು ನಿ ಡಿ 10 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ನಿ ಡಿ 1 ರಿಂದ 10 ರ ಜಮೀನುಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಮತ್ತು ಸದರಿ ಆಸ್ತಿಗಳ ಬಗ್ಗೆ ವಿವರಣೆ ನೀಡಿಲ್ಲ ಎಂದರೆ ಸರಿ. ಮೇಲೆ ಹೇಳಿದ ನಿಮ್ಮ ತಂದೆಯ ಹೆಸರಿನಲ್ಲಿರುವ ಮತ್ತು

ಮಾರಾಟ ಮಾಡಿರುವ ಎಲ್ಲಾ ಆಸ್ತಿಗಳ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಸ ನಂ 494 ಹೊರತುಪಡಿಸಿ ಉಳಿದ ಆಸ್ತಿಗಳ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸ ನಂ 494 ರ ಜಮೀನನ್ನು ಈ ದಾವೆಯಲ್ಲಿ ಯಾವ ಕಾರಣಕ್ಕೆ ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿಯು ಈ ದಾವೆಯನ್ನು ಸಲ್ಲಿಸುವ ಮೊದಲೇ ನಾನು ನನ್ನ ತಮ್ಮ ಮತ್ತು ನನ್ನ ತಂದೆಯವರು ಭಾಗ ಮಾಡಿಕೊಂಡಿರುವ ಕಾರಣ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುದಿಲ್ಲ. ಸ ನಂ 494 ರ ಜಮೀನನ್ನು ನೀವು ನಿಮ್ಮ ತಮ್ಮ ಮತ್ತು ನಿಮ್ಮ ತಂದೆ ಭಾಗ ಮಾಡಿಕೊಂಡಿದ್ದೀರಿ ಎಂದು ವಾದ ಪತ್ರದಲ್ಲಾಗಲೀ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಾಗಲಿ ಸ್ಪಷ್ಟೀಕರಣ ತೋರಿಸಿಲ್ಲ ಎಂದರೆ ಸರಿ. ಗಣದಿನ್ನಿ ಸೀಮಾದ ಸ ನಂ 138/*/*, ರಲ್ಲಿ ವಿಸ್ತೀರ್ಣ 10 ಎಕರೆ 10 ಗುಂಟೆ ಜಮೀನನ್ನು ವೆಂಕಟೇಶ ತಂದೆ ಮಾರೆಪ್ಪ ಇವರಿಗೆ ನಿಮ್ಮ ತಂದೆ ದಿನಾಂಕ: 14-06-2022 ರಂದು ಮಾರಾಟ ಮಾಡಿದ್ದಾರೆ ಸಾಕ್ಷಿಗೆ ಸದರಿ ಪಹಣೀ ಮತ್ತು ಮುಟೇಶನ್ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿ ಡಿ 11 ಮತ್ತು 12 ಎಂದು ಗುರುತಿಸಲಾಯಿತು. ಗಣದಿನ್ನಿ ಸೀಮಾದ ಸ ನಂ 138/*/*, ರಲ್ಲಿ ವಿಸ್ತೀರ್ಣ 04 ಎಕರೆ 20 ಗುಂಟೆ ಜಮೀನನ್ನು ಗಂಗಪ್ಪ ತಂದೆ ಬಸವರಾಜಪ್ಪ ಇವರಿಗೆ ನಿಮ್ಮ ತಂದೆ ದಿನಾಂಕ: 14-06-2022 ರಂದು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ ತಂದೆ ಸ ನಂ 138 ರ ಜಮೀನನ್ನು ಹೆಚ್ಚಿನ ಬೆಲೆಗೆ ಮಾರೆಪ್ಪ, ವೆಂಕಟೇಶ, ಗಂಗಪ್ಪ ಇವರಿಗೆ ಮಾರಾಟ ಮಾಡಿ ಬಂದ ಹಣವನ್ನು 3ನೇ ಪ್ರತಿವಾದಿಗೆ ನೀಡದೆ ಮೋಸ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಜಮೀನು ಮಾರಾಟ ಮಾಡಿ ಬಂದ ಹಣದಲ್ಲಿ 3ನೇ ಪ್ರತಿವಾದಿಯಿಂದ ಮುಂಗಡವಾಗಿ ಪಡೆದುಕೊಂಡ 25 ಲಕ್ಷ ರೂ ಗಳನ್ನು ಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

6. 3ನೇ ಪ್ರತಿವಾದಿಗೆ ದಾವಾ ಆಸ್ತಿ ಮಾರಾಟ ಮಾಡಿದ 2-3 ದಿನದಲ್ಲಿ ಬೇರೆಯವರಿಂದ ಮಾಹಿತಿ ನನಗೆ ಗೊತ್ತಾಯಿತು. ದಿನಾಂಕ: 22-07-2022 ರಂದು ದಾವಾ ಜಮೀನು 3ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ನಿಮಗೆ ಗೊತ್ತಾಯಿತು ಎಂದರೆ ಸಾಕ್ಷಿಯು 1 ವಾರದೊಳಗೆ ಗೊತ್ತಾಯಿತು ನಂತರ ತಹಶೀಲ್ದಾರ ಕಚೇರಿಗೆ ತಕರಾರು ಅರ್ಜಿಯನ್ನು ಕೊಟ್ಟಿರುತ್ತೇವೆ ಎನ್ನುತ್ತಾರೆ. ತಹಶೀಲ್ದಾರ ಕಚೇರಿಗೆ ನನ್ನ ತಾಯಿ ತಕರಾರು ಅರ್ಜಿ ಕೊಟ್ಟಿರುತ್ತಾರೆ. ಖರೀದಿ ಪತ್ರದಂತೆ ದಾವಾ ಆಸ್ತಿಯು 3ನೇ ಪ್ರತಿವಾದಿ ಹೆಸರಿಗೆ ಮುಟೇಶನ್ ಆಗಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ದಾವಾ ಆಸ್ತಿಯನ್ನು 3ನೇ ಪ್ರತಿವಾದಿ ಬೇರೆ ಯಾರಿಗೂ ಮಾರಾಟ ಮಾಡಬಾರದು ಎಂದು ಮದ್ಯತರ್ ತಡೆಯಾಜ್ಞೆ ತೆಗೆದುಕೊಂಡಿದ್ದೀರಿ ಎಂದರೆ ಸರಿ. ನೀವು ನ್ಯಾಯಾಲಯದಲ್ಲಿ ತಡೆಯಾಜ್ಞೆ ಆದೇಶ ಪಡೆದುಕೊಳ್ಳುವಷ್ಟರಲ್ಲಿ 3ನೇ ಪ್ರತಿವಾದಿಗೆ ಮಾರಾಟ ಆಗಿತ್ತು ಎಂದರೆ ಸರಿಯಲ್ಲ. ಮಧ್ಯಂತರ ಅರ್ಜಿಯಲ್ಲಿ ನಿಮಗೆ ಗೊತ್ತಿಲ್ಲದಂತೆ 3ನೇ ಪ್ರತಿವಾದಿ ಖರೀದಿ ನೊಂದಣಿ ಮಾಡಿಸಿಕೊಂಡಿದ್ದಾರೆಂದು ಬರೆಸಿದ್ದೀರಿ ಎಂದರೆ ಸರಿ. ನೀವು ತಹಶೀಲ್ದಾರ ರವರೊಂದಿಗೆ ಮಿಲಾಪೆಯಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಬಾರದೆಂದು ತಡೆಯಾಜ್ಞೆ ಇದ್ದರು ಅದನ್ನು 3ನೇ ಪ್ರತಿವಾದಿ ಹೆಸರಿಗೆ ಮುಟೇಶನ್ ಮಾಡಬಾರದೆಂದು ಹೇಳಿ 3ನೇ ಪ್ರತಿವಾದಿ ಹೆಸರಿಗೆ ಮುಟೇಶನ್ ಮಾಡಲು ತಕರಾರು ಮಾಡಿದ್ದೀರಿ ಎಂದರೆ ಸರಿಯಲ್ಲ.

7. 2ನೇ ಪ್ರತಿವಾದಿ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಆದರೂ 2ನೇ ಪ್ರತಿವಾದಿಯ ವಿಳಾಸವನ್ನು ದೇವದುರ್ಗದಲ್ಲಿ ಸುಳ್ಳು ತೋರಿಸಿದ್ದೀರಿ ಎಂದರೆ ಸಾಕ್ಷಿಯು ಇಲ್ಲೇ ಇದ್ದರೂ ಇತ್ತೀಚೆಗೆ ಆಸ್ಟ್ರೇಲಿಯಾದ ಸಿಡ್ನಿ ಗೆ ಹೋಗಿದ್ದಾರೆ ಎನ್ನುತ್ತಾರೆ. ನ್ಯಾಯಾಲಯದ ಬೇಲೀಫ್ ರವರು ನೋಟಿಸ್ ಜಾರಿ ಮಾಡುವಾಗ 2ನೇ ಪ್ರತಿವಾದಿ ವಾಸಸ್ಥಳದಲ್ಲಿರುವುದಿಲ್ಲ ಎಂದು ವರದಿಯನ್ನು

ಮಾಡಿದ್ದಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿರಲಿಲ್ಲ ಎನ್ನುತ್ತಾರೆ. 2ನೇ ಪ್ರತಿವಾದಿ ಆಸ್ಟ್ರೇಲಿಯಾದ ಸಿಡ್ನಿಯಲ್ಲಿ 7-8 ವರ್ಷದಿಂದ ಕೆಲಸ ಮಾಡುತ್ತಾರೆ. ಈ ದಾವೆಯಲ್ಲಿ ನಿಮ್ಮ ತಂದೆಯ ಉಳಿಕೆ ಪಿತರ್ಆರ್ಜಿತ ಆಸ್ತಿಗಳನ್ನು ಮತ್ತು ಬೇರೆಯವರಿಗೆ ಮಾರಾಟ ಮಾಡಿದ ಆಸ್ತಿಗಳನ್ನು ಸೇರ್ಪಡೆ ಮಾಡದೆ ದುರುದ್ದೇಶದಿಒಂದ 3ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯನ್ನು ಸೇರಿಸಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಖರೀದಿ ಮಾಡಿದ ದಿನಾಂಕದಿಂದ 3ನೇ ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜಾದಾರನಾಗಿದ್ದಾನೆಂದರೆ ಸರಿಯಲ್ಲ. ನಿಮ್ಮ ತಂದೆ ತಾಯಿ ಅನಾರೋಗ್ಯದಿಂದ ಇರುವುದರಿಂದ ಅವರನ್ನು ಆಸ್ಪತ್ರೆಗೆ ತೋರಿಸುತ್ತಿದ್ದೀರಿ ಎಂದರೆ ಸರಿ. ನಿಮ್ಮ ತಂದೆಯ ಕುಟುಂಬದ ಹಿರಿತನ ಮತ್ತು ಯಜಮಾನ ಆಗಿದ್ದಾನೆ ಎಂದರೆ ಸರಿ. ನಿಮ್ಮ ತಂದೆಗೆ ಕುಟುಂಬದ ಅವಶ್ಯಕತೆ ಇದ್ದರೆ ಆಸ್ತಿಯನ್ನು ಮಾರಾಟ ಮಾಡುವ ಹಕ್ಕು ಇದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ ಡಾನ್ ಬಾಸ್ಕೋ ಶಾಲೆಗೆ ಮತ್ತು ಗಣದಿನ್ನಿಯಲ್ಲಿರುವ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡಿದನ್ನು ನೀವು ಯಾಕೆ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮಗೆ ಎಲ್ಲಾ ವಿಚಾರ ಗೊತ್ತಿದ್ದರೂ 3ನೇ ಪ್ರತಿವಾದಿಗೆ ಬಾಕಿ ಹಣ ಕೊಡಬೇಕಾಗುತ್ತದೆ ಎಂಬ ಉದ್ದೇಶದಿಂದ ಅವರಿಗೆ ತೊಂದರೆ ಕೊಡಲು ಈ ದಾವೆಯನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಗಣದಿನ್ನಿ ಸೀಮಾಂತರದ ಜಮೀನು ನಿಮ್ಮ ಕುಟುಂಬದ ಅವಶ್ಯಕತೆಗಾಗಿ 3ನೇ ಪ್ರತಿವಾದಿಗೆ ನೋಂದಣಿ ಖರೀದಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು ಮಾಲೀಕತ್ವ ಮತ್ತು ಕಬ್ಜಾ ಇಲ್ಲ ಎಂದರೆ ಸರಿಯಲ್ಲ.

8. ಸಾಕ್ಷಿಗೆ ದೇವದುರ್ಗ ಸೀಮಾದ ಸ ನಂ 477/2, ವಿಸ್ತೀರ್ಣ 03 ಎಕರೆ 07 ಗುಂಟೆ ಜಮೀನನ್ನು ಮತ್ತು ದೇವದುರ್ಗ ಸೀಮಾದ ನಂ 477/3, ವಿಸ್ತೀ 01 ಎಕರೆ 08 ಗುಂಟೆ ನಿಮ್ಮ

ತಂದೆಯ ಹೆಸರಿಗೆ ಪಹಣೀ ಆಗಿದೆ ಸಾಕ್ಷಿಗೆ ಸದರಿ ಪಹಣಿಗಳ ಪ್ರತಿಯನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿ ಡಿ 13 ಮತ್ತು 14 ಎಂದು ಗುರುತಿಸಲಾಯಿತು. ಸಾಕ್ಷಿಗೆ ದೇವದುರ್ಗ ಸೀಮಾದ ಸ ನಂ 494/*/* ವಿಸ್ತೀರ್ಣ 02 ಎಕರೆ 04 ಗುಂಟೆ ಜಮೀನನ್ನು ನಿಮ್ಮ ತಂದೆ ರವಿಕುಮಾರ ತಂದೆ ಸೂಗಣ್ಣ ಇವರಿಗೆ ಮಾರಾಟ ಮಾಡಿದ್ದು ಸದರಿ ಜಮೀನು ಎನ್ ಎ ಆಗಿ ನೀವೇಶನಳಾಗಿವೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿ ಮುಟೇಶನ್ ನೋಡಿ ಗುರುತಿಸಿದ್ದರಿಂದ ಅದನ್ನು ನಿ ಡಿ 15 ಗುರುತಿಸಲಾಯಿತು. ಮೇಲೆ ಹೇಳಿದ ನಿ ಡಿ 1 ರಿಂದ 15 ರ ಜಮೀನುಗಳ ಬಗ್ಗೆ ಮಾಹಿತಿ ಇದ್ದರು ಅದನ್ನು ಸೇರ್ಪಡೆ ಮಾಡದೆ 3ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನೀವು ನಿಮ್ಮ ಕುಟುಂಬದವರು ಶಾಮೀಲಾಗಿ ಈ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. 3ನೇ ಪ್ರತಿವಾದಿಗೆ ನಿಮ್ಮ ತಂದೆ ಕಾನೂನು ಬದ್ದ ಖರೀದಿ ಪತ್ರ ಮಾಡಿಕೊಟ್ಟಿದ್ದಾರೆ ನಿಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ 3ನೇ ಪ್ರತಿವಾದಿಯೇ ಮಾಲೀಕ ಮತ್ತು ಕಬ್ಜಾದಾರನಾಗಿದ್ದಾನೆಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಈ ಹಂತದಲ್ಲಿ 1 ಮತ್ತು 2ನೇ ಪ್ರತಿವಾದಿ ಪರ ವಕೀಲರು ಪಾಟೀಸವಾಲಿಗೆ ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/-
ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ